ಬೇಕಾಗಲಿಲ್ಲ.

ಆಗಿನಿಂದಲೂ ಮಗ ಮನೆಗೆ ಬಾರದೆ ಇರುವ ಸಂಕಟ ಅವರ ಪಾಲಿಗೆ ಕೂತಾಗ, ನಿಂತಾಗ, ಮಲಗಿದಾಗ ಸಹ ಮನಸ್ಸು ಒಂಥರಾ ಸಂತಪ್ತವಾಗೇ ಇದೆ. ಮಗನ ಮೇಲಾಗಲೀ, ಮಳೆಯ ಮೇಲಾಗಲಿ ಭರವಸೆ ಇಡುವ ಹಾಗೇ ಇಲ್ಲ ಎಂಬ ಅಳುಕು ತಪ್ಪುತ್ತಲೇ ಇಲ್ಲ.

*****

ಇದ್ದಕ್ಕಿದ್ದಂತೆ ಗಿರಿ ಬಂದದ್ದು ನೋಡಿ ದೇಸಾಯರಿಗೆ ಗೊಂದಲ. ಅವನ ಮುಖ ದಿಟ್ಟಿಸಿದರೆ ಅಲ್ಲಿ ಕಂಡದ್ದು ಆಯಾಸ. ಸೋತ ಹಾಗೂ ಭಾಸ. ತಲೆ ಕೆಡಲು ತಡವಾಗಲಿಲ್ಲ. 'ಹೂಂ. ಗಂಡ ಹೆಂಡರಲ್ಲಿ ಏನೋ ಆಗಿದೆ. ತಾಪತ್ರಯ ಏನು ಅನ್ನೋದು ಈಗ ಇವನ ಅರಿವಿಗೆ ಬಂದಿರಬೇಕು. ತಮ್ಮ ಮಾತು ಕೇಳಿದ್ದರೆ ಹೀಗೆ ಮುಖ ಒಣಗಿಸಿಕೊಳ್ಳುವ ಸಂದರ್ಭ ಬರುತ್ತಿತ್ತೇ? ಈಗ ಕಂಗೆಟ್ಟರೆ ಏನು ಪ್ರಯೋಜನ. ಮದುವೆಗೆ ಮೊದಲೇ ಇದನ್ನೆಲ್ಲ ಯೋಚಿಸಬೇಕಾಗಿತ್ತು' ಎಂದೆಲ್ಲ ಒಳಗೊಳಗೆ ಸಂತಾಪ ಪಟ್ಟುಕೊಳ್ಳುತ್ತ ಮಗನತ್ತ ತಿರುಗಿ ಕಕ್ಕುಲತೆಯಿಂದ ಕೇಳಿದರು. 'ಇದೇನು ಒಬ್ಬನೇ ಬಂದಿದೀಯ? ಎಲ್ಲಿ ನಿನ್ನ ಹೆಂಡತಿ?'

'ಇಬ್ರೂ ಯಾವಾಗಿನಿಂದ ಬರಬೇಕುಂತಾನೇ ಇದ್ವಿ... ಈಗಲೂ ಬರಬೇಕುಂತ ಇದ್ಲು... ಆದರೇ...'

ಹುಂ —ದೇಸಾಯರು ಅಸಮಾಧಾನದಿಂದ ತಲೆ ಹಾಕಿದರು. ಇನ್ನೇನು ಕಾರಣ? ರಜೆ ಸಿಕ್ಕಲಿಲ್ಲ. ಮಗುವಿಗೆ ಹುಷಾರಿಲ್ಲ ಇಂಥವೇ ತಾನೆ! ಇವನೇನೋ ಹೆಂಡತಿ ಹಾಗೆ ಹೀಗೆ ಅಂತ ವಹಿಸಿಕೊಂಡು ಮಾತಾಡ್ತಾನೆ. ಫೋನಿನಲ್ಲಿಯೂ ಸಕ್ಕರೆಯ ಹಾಗೆ ಮಾತಾಡ್ತಾಳೆ. ಇಲ್ಲೇ ಗೊತ್ತಾಗಿ ಹೋಗುತ್ತದಲ್ಲ — ಜಾಣೆ ಅಂತ. ಮುಖ್ಯ ಅಭಿಮಾನ ಇರಬೇಕಲ್ಲ. ಅತ್ತೆ ಮಾವ ಅಂತ ಆದರ ಇದ್ದಿದ್ದರೆ ಬರುತ್ತಿರಲಿಲ್ಲವೇ?

'ಇರ್ತೀಯಾ ಎರಡು ದಿನ' ದೇಸಾಯರು ಕೇಳಿದರು.

ಅವನು ಚಕ್ಕನೆ ಮುಖ ಎತ್ತಿದ. 'ಅಪ್ಪ — ನಾನು ಬಂದದ್ದು ನಿಮ್ಮನ್ನು ಕರಕೊಂಡು ಹೋಗಲು ಇವತ್ತೇ...'

'ಹೀಗೆ ನಿಂತಕಾಲಲ್ಲಿ ಬಾ ಅಂದ್ರೆ ಹೇಗೋ ನೋಡೋಣ...'

'ಅಪ್ಪ — ನಿಮ್ಮ ಮನೋಭಾವವನ್ನು ವಿನತಾ ಅವತ್ತೇ ಗುರುತಿಸಿದ್ದಾಳೆ. ಮದುವೇಲಿ ನೀವು ಅವಳ ಜತೆ ಮನಃ ಪೂರ್ವಕವಾಗಿ ಮಾತಾಡಲಿಲ್ಲವಂತೆ. ಉಳಿಯಲೂ ಇಲ್ಲ. ಅವಳು ಫೋನ್ ಮಾಡಿದರೂ ನಿಮ್ಮಿಂದ ಬಂದದ್ದು ಬರೀ ಔಪಚಾರಿಕ ಮಾತು. ಹೀಗೆಲ್ಲ ಆಗಿ ನೀವು ನಮ್ಮ ಮದುವೇನ ಒಪ್ಪಿಕೊಳ್ಳುತ್ತಿಲ್ಲ ಅಂತ ಅವಳು ಅರ್ಥಮಾಡಿಕೊಂಡಿದ್ದಾಳೆ. ಇದಕ್ಕಿಂತ ಹೆಚ್ಚಾಗಿ ಮಗನನ್ನೇ ಮರೆತವರಂತೆ ನೀವು ವರ್ತಿಸೋದು ಭಾಸವಾಗಿ ಅವಳು ಬೆದರಿ ಹೋಗಿದ್ದಾಳೆ. ನಿಮ್ಮ ಈ ಪ್ರಕ್ಷುಬ್ಧ ಮನಸ್ಥಿತಿಗೆ ತಾನೇ ಕಾರಣವೇನೋ ಎಂಬ ಕೊರಗು. ಅವಳನ್ನು ಬಾಧಿಸುತ್ತಾ ಇದೆ. ಈ ಕಾರಣಕ್ಕೋ ಏನೋ ಹೋದವಾರ... ಅವಳಿಗೆ... ಅಬಾರ್ಷನ್ ಆಯ್ತು...'

ಈ ಮಾತು ಅಡಿಗೆ ಮನೆಯಲ್ಲಿದ್ದ ತಾಯಿಗೆ ಕೇಳಿಸಿ 'ಹೌದೇನೋ' ಎಂಬ ಆತಂಕದಲ್ಲಿ ಧಾವಿಸಿ ಬಂದಳು. ಅವನು ಮತ್ತೆ ಹೇಳಿದ. 'ಅಮ್ಮ ಇಂಥ ಹೊತ್ತಿನಲ್ಲಿ ನೀವು ಬಂದು ನಮ್ಮ ಜತೆಗಿದ್ದರೆ ತನಗೆ ತುಂಬ ಸಮಾಧಾನವಾಗುತ್ತೆ ಅಂತ ವಿನತಾ ಹೇಳಿಕಳಿಸಿದ್ದಾಳೆ. ಅಲ್ಲಿ ನಿಮಗೆ ಏನೂ ತೊಂದರೆ ಆಗೋದಿಲ್ಲ. ನೀವು ಹಾಯಾಗಿ ಇರಬಹುದು.'

ಮಗನ ಮಾತು ಕೇಳಿಯೂ ದೇಸಾಯರ ಮನಸ್ಸು ತಕ್ಷಣಕ್ಕೆ ಒಡಂಬಡಲಿಲ್ಲ. ಆದರೆ ಹೆಂಡತಿ ಹೊರಟು ಬಿಟ್ಟಾಳು ಎಂದು ಹೆದರಿ 'ಈಗಿಂದೀಗ ಅಂದರೆ ಕಷ್ಟಾನಪ್ಪಾ... ನೋಡೋಣ'